ಕಬ್ಬನ್ನು ತೆಗೆದುಕೊಳ್ಳದೇ ಕಬ್ಬು ಒಣಗಿಹೋಗಿಬಿಟ್ಟರೆ ಕಾರ್ಖಾನೆಯವರ ಮೇಲೆ ಕೇಸ್ ಹಾಕುವುದಿಲ್ಲ. ಆದರೆ ಅವನೇನಾದರೂ ಒಪ್ಪಂದವಾಗಿರತಕ್ಕ ಕಬ್ಬನ್ನು ಬೇರೆ ಕಡೆ ಮಾರಿದರೆ ಅವನ ಮೇಲೆ ಕ್ರಿಮಿನಲ್ ಕೇಸನ್ನು ಹಾಕುತ್ತಾರೆ.

ಶ್ರೀ ಎನ್. ಚಿಕ್ಕೇಗೌಡ:- ಉಪಾಧ್ಯಕ್ಷಣಿಯವರೇ, ಈಗ ರೈತ ಬೆಳೆದಂತ ಕಬ್ಬನ್ನು ಒಪ್ಪಂದವನ್ನು ಬಿಟ್ಟು ಬೇರೆಯವರಿಗೆ ಮಾರಿದರೆ, ಬೇರೆ ಕಡೆಗೆ ವರ್ಗಾಯಿಸಿ ಉಪಯೋಗಿಸಿದರೆ ಕೇಸ್ ಹಾಕುತ್ತಾರೆ ಮತ್ತೆ ಕಾರ್ಖಾನೆಯವರು ಒಪ್ಪಂದದ ಪ್ರಕಾರ ಸಕಾಲದಲ್ಲಿ ಕಬ್ಬನ್ನು ತೆಗೆದುಕೊಳ್ಳದಿದ್ದರೆ ಫ್ಯಾಕ್ಟರಿಗೆ ಸಂಬಂಧಪಟ್ಟ ಆಕ್ಟಿನಲ್ಲಿ ಬರುತ್ತದೆ.

ಶ್ರೀಮತಿ ದಮಯಂತಿ ಬೋರೇಗೌಡ:- ನಿಮ್ಮ ವಿಳಂಬ ನೀತಿಯಿಂದ ರೈತರಿಗೆ ಕೋಟ್ಯಾಂತರ ರೂಪಾಯಿ ಲಾಸ್ ಆಗಿದೆ. ಇದಕ್ಕೆ ತಾವು ಏನು ಹೇಳುತ್ತೀರಿ?

ಶ್ರೀ ಎನ್. ಚಿಕ್ಕೇಗೌಡ:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ಸದಸ್ಯಣಿಯವರು ಹೇಳಿದಂತಹ ಕಳಕಳಿ ಏನು ಇದೆ ಅದಕ್ಕೆ ನಾನು ಕೂಡ ಸ್ಪಂದಿಸುತ್ತೇನೆ. ಯಾರು ಅಗ್ರಿಮೆಂಟ್ ಮಾಡಿಕೊಂಡು ಅವರು ಸಕಾಲದಲ್ಲಿ ಕಬ್ಬನ್ನು ಅರೆದು ಅವರಿಗೆ ದೊರೆಕಬೇಕಾದಂತಹ ಹಣವನ್ನು ಕೊಡದೇ ಇರುವುದು ಬಹಳ ತಪ್ಪು, ಯಾರೇ ಆಗಿರಲಿ, ಸರ್ಕಾರದ ಯಾವುದೇ ನೀತಿಯಾಗಿರಲಿ, ಕೈಗಾರಿಕಾ ಇಲಾಖೆಯಾಗಿರಲಿ ಅಥವಾ ಕಬ್ಬಿನ ಫ್ಯಾಕ್ಟರಿಯವರಾಗಲಿ ಅವರು ಸಕಾಲದಲ್ಲಿ ಕಬ್ಬನ್ನು ತೆಗೆದುಕೊಂಡು ರೈತರಿಗೆ ಹಣ ಒದಗಿಸಬೇಕು. ರೈತರು 16-18 ತಿಂಗಳು ಕಬ್ಬು ಬೆಳೆಯುವುದಕ್ಕೆ ನೀರು ಕೊಟ್ಟು, ಗೊಬ್ಬರ ಕೊಟ್ಟು, ಭೂಮಿಯನ್ನು ಉಪಯೋಗಿಸಿ ಕಬ್ಬನ್ನು ಬೆಳೆದಾಗ ಅದನ್ನು ಸಕಾಲದಲ್ಲಿ ಅರೆಯದೇ ಹೋದರೆ ಅದು ತಪ್ಪಾಗುತ್ತದೆ.

ಉಪಾಧ್ಯಕ್ಷಣಿಯವರು:- ಅದು ತಪ್ಪು ಸರಿ, ಹಣ ಕೊಡುವುದಕ್ಕೆ ತಾವು ಏನು ಮಾಡುತ್ತೀರಿ?

ಶ್ರೀ ಎನ್. ಚಿಕ್ಕೇಗೌಡ:- ಇದು ನನ್ನ ಇಲಾಖೆಗೆ ಬರುವುದಿಲ್ಲ; ಆದರೂ ಕೂಡ ನಾನು ಅವರ ಜೊತೆಯಲ್ಲಿ ಸ್ಪಂದಿಸಿ ಹೇಳುತ್ತೇನೆ, ನಾನು ಏನಿದ್ದರೂ ಕಬ್ಬನ್ನು ಬೆಳೆಯುವರಿಗೆ ಮಾತ್ರ ಹೇಳಬಹುದು, ಬೆಳೆದ ಮೇಲೆ ಕಟಾವ್ ಆಗುವುದು, ತದನಂತರ ಅದನ್ನು ಅರೆಯುವುದು, ರಕ್ಷಣೆ ಕೊಡುವುದು, ಸಕಾಲದಲ್ಲಿ ಹಣ ಒದಗಿಸುವುದು, ಇದೆಲ್ಲಾ ಬೇರೆ ಇಲಾಖೆಗೆ ಬರುತ್ತದೆ.

ನಗರದ ಬೆಂಗಳೂರು ಡೈರಿಯ ಹಾಲು ಪಾರ್ಲರ್‌ಗಳ ಸಂಖ್ಯೆ.

453 (2131) ಶ್ರೀ ರಾಮಲಿಂಗ ರೆಡ್ಡಿ(ಜಯನಗರ)

ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :-

ಅ) ಬೆಂಗಳೂರು ನಗರದಲ್ಲಿ ಕಾರ್ಯಾಚರಣೆಯಲ್ಲಿರುವ ಬೆಂಗಳೂರು ಡೈರಿಯ ಹಾಲು ಪಾರ್ಲರ್‌ಗಳ ಸಂಖ್ಯೆ ಎಷ್ಟು;

ಆ) ಇದರಲ್ಲಿ ಗುತ್ತಿಗೆ ಅವಧಿ ಮುಗಿದ ಮೇಲೆ ಮುಚ್ಚಿರುವ ಪಾರ್ಲರ್‌ಗಳ ಸಂಖ್ಯೆ ಎಷ್ಟು;

ಇ) ಹೊಸ ಗುತ್ತಿಗೆ ನೀಡಲು ಅರ್ಜಿಗಳನ್ನು ಕರೆಯಲಾಗಿದೆಯೇ;

ಈ) ಹಾಗಿದ್ದಲ್ಲಿ, ಪ್ರಸ್ತುತ ಮುಚ್ಚಿರುವ ಹಾಲು ಗುತ್ತಿಗೆ ನೀಡಲು ತೆಗೆದ ಕೊಂಡಿರುವ ಕ್ರಮವೇನು?

ಶ್ರೀ ಬಸವರಾಜ್ ಪಾಟೀಲ್(ಪಶು ಸಂಗೋಪನಾ ಮತ್ತು ಪಶು ವೈದ್ಯ ಸೇವಾ ಸಚಿವರು)-

ಅ) 9

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗ ರೆಡ್ಡಿ:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಒಟ್ಟು 9 ಮಿಲ್ಕ್ ಪಾರ್ಲರ್ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ಆದರೆ ಎಲ್ಲಲ್ಲಿ ಇದೆ ಅಂತ ಹೇಳಿಲ್ಲ ಮತ್ತು ಯಾವ ಆಧಾರದ ಮೇಲೆ ಈ ಉಪ ನಿಬಂಧಕರಿಗೆ ಆ ಒಂದು ಪಾರ್ಲರ್ ಕೊಟ್ಟಿದ್ದಾರೆ ಮತ್ತು ಈ ಮಿಲ್ಕ್ ಪಾರ್ಲರ್‌ಗಳು ಲಾಭದಲ್ಲಿ ನಡೆಯುತ್ತಿವೆಯೇ? 9 ಮಿಲ್ಕ್ ಪಾರ್ಲರ್‌ಗಳು ಏನು ಇವೆ, ಅವು ಸಾಲದು; ಜಯನಗರ ಬಸ್ ಸ್ಟ್ಯಾಂಡ್‌ನಲ್ಲಾಗಲಿ ನಮ್ಮ ರೈಲ್ವೆ ಸ್ಟೇಷನ್‌ನಲ್ಲಾಗಲಿ ಮತ್ತು ಸಿಟಿ ಮಾರ್ಕೆಟಿನಲ್ಲಾಗಲಿ ಈ ಮಿಲ್ಕ್ ಪಾರ್ಲರ್‌ಗಳಿಲ್ಲ. ಆದ್ದರಿಂದ ಹೆಚ್ಚು ಸಂಖ್ಯೆಯಲ್ಲಿ ಜನರು ಎಲ್ಲಿ ಓಡಾಡುತ್ತಾರೋ ಅಲ್ಲಿಇನ್ನೂ ಹೆಚ್ಚಿನ ರೀತಿಯಲ್ಲಿ ಪಾರ್ಲರ್ ತೆಗೆಯುವ ಒಂದು ಉದ್ದೇಶ ಇದೆಯೇ ಎಂದು ನಾನು ಕೇಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್:- ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಮಾನ್ಯ ಸದಸ್ಯರು ಒಂಬತ್ತು ಪಾರ್ಲರ್‌ಗಳು ಎಲ್ಲಿವೆ, ಆ ಸ್ಥಳಗಳ ಹೆಸರು ತಿಳಿಸಿಲ್ಲವೆಂದು ಹೇಳುತ್ತಿದ್ದಾರೆ. ಅವುಗಳು ಜನತಾ ಬಜಾರ್, ಸಿಟಿ ಮಾರ್ಕೆಟ್, ಡಿ. ಸಿ. ಆಫೀಸ್ ಕಾಂಪೌಂಡ್, ಎಂ. ಎಸ್. ಬಿಲ್ಡಿಂಗ್, ಮೆಯೋಹಾಲ್, ಪಿ. ಡಬ್ಲ್ಯೂ. ಡಿ. ಆಫೀಸ್, ಹೈ ಕೋರ್ಟ್, ಕೆ. ಎಸ್. ಆರ್. ಟಿ. ಸಿ. ಡಿಪೋ ಹಾಗೂ ರೈಲ್ವೆ ಸ್ಟೇಷನ್ ಹೀಗೆ 9 ಕಡೆ ತೆರೆಯಲಾಗಿದೆ. ಇನ್ನು ಅವರು ಕೇಳಿದ ಪ್ರಕಾರ ಇನ್ನು ಐದು ಪಾರ್ಲರ್‌ಗಳ ಅವಶ್ಯಕತೆ ನಮಗೆ ಕಾಣುತ್ತಿದೆ. ಕಾರ್ಪೊರೇಷನ್‌ನವರ ಜೊತೆಗೆ ಚರ್ಚೆ ಮಾಡುತ್ತೇವೆ. ಜಯನಗರ ಕಾಂಪ್ಲೆಕ್ಸ್, ಮಲ್ಲೇಶ್ವರಂ, ಶಿವಾಜಿನಗರ, ಶೇಷಾದ್ರಿಪುರಂ, ರಾಜಾಜಿನಗರ ಮುಂತಾದ ಕಡೆ ಹೊಸದಾಗಿ ತೆರೆಯುವ ಬಗ್ಗೆ ಕೆ. ಎಂ. ಎಫ್.ನ ವಿಚಾರದಲ್ಲಿದೆ.

ಶ್ರೀ ಎ.ಕೆ.ಅನಂತಕೃಷ್ಣ:- ಮೆಯೋ ಹಾಲ್‌ನಲ್ಲಿ ಮಿಲ್ಕ್ ಪಾರ್ಲರ್ ಎಲ್ಲಿ ಇದೆ? ಜನತಾ ಬಜಾರ್‌ನಲ್ಲಿ ಎಲ್ಲಿ ಇದೆ. ?

ಶ್ರೀ ಬಸವರಾಜ ಪಾಟೀಲ್:- ಜನತಾ ಬಜಾರ್ ಹೊರಗಡೆ ಒಂದು ಗುಪ್ತಾ ಮಾರ್ಕೆಟ್ ಅಂತ ಇದೆ ; ಮೆಯೋಹಾಲ್‌ನಲ್ಲಿ ಬೇರೆ ಇದೆ, ಅದನ್ನೆಲ್ಲಾ ಒಂದಕ್ಕೊಂದಕ್ಕೆ ಸೇರಿಸಬೇಡಿ.

ಶ್ರೀ ರಾಮಲಿಂಗರೆಡ್ಡಿ:- ಸನ್ಮಾನ್ಯ ಅಧ್ಯಕ್ಷಣಿಯವರೇ, ಅಲ್ಲಿ ಒಂದು ಪಾರ್ಲರ್‌ನಲ್ಲಿ ಏನಾಗಿದೆ, ೩೫೦ಎಂ.ಎಲ್. ಬಾಟ್ಲ್‌ನಲ್ಲಿ ಕೊಡುತ್ತಿದ್ದಾರೆ. ಇದನ್ನು ಇನ್ನು ೧೦೦ ಎಂ.ಎಲ್.ಇಲ್ಲವೇ ೧೨೫ ಎಂ.ಎಲ್ ಬಾಟಲ್ಸ್‌ನಲ್ಲಿ ಕೊಡಬೇಕು. ಮತ್ತು ಅದರ ಮೇಲೆ ಡೇಟ್ ಹಾಕಿ ಕೊಡಬೇಕು. ಈಗ 4-5 ದಿವಸವಾದರೂ ಅದನ್ನೇ ತಂದು ಕೊಡುತ್ತಿರುತ್ತಾರೆ. ಪ್ರತಿದಿನ ಬದಲಾಯಿಸಿ ಕೊಡಬೇಕೆಂದು ನಾನು ಹೇಳುತ್ತಿದ್ದೇನೆ.

ಶ್ರೀ ಬಸವರಾಜ ಪಾಟೀಲ್:- ಸನ್ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ, ಅದನ್ನು ಪೂರೈಸಲು ನಾನು ಪ್ರಯತ್ನ ಮಾಡುತ್ತೇನೆ.

ಉಪಾಧ್ಯಕ್ಷಣಿಯವರು:- ಮಾನ್ಯ ಸಿದ್ದಯ್ಯನವರೇ ತಮ್ಮ ಪ್ರಶ್ನೆಯನ್ನು ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ಗೆ ಕಳುಹಿಸಿದ್ದಾರೆ, ಆದ್ದರಿಂದ ಅಲ್ಲಿಂದ ಉತ್ತರ ಬಂದಮೇಲೆ ತೆಗೆದುಕೊಳ್ಳೋಣ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಿಬ್ಬಂದಿ ಬಗ್ಗೆ.

458 (2112) ಶ್ರೀ ಎ.ಎಂ.ಹಿಂಡಸ್‌ಗೇರಿ (ಹುಬ್ಬಳ್ಳಿ)